# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನಿಗಮ ಕಛೇರಿ:
ನಂ-29, ವಿಜಯನಗರ 2ನೇ ಹಂತ,
ಹಿನಕಲ್, ಮೈಸೂರು-5700117
ವೆಬ್ ಸೈಟ್: www.cescmysore.org
CIN:U40109KA2004SGC035177

ಅಧೀಕ್ಷಕ ಇಂಜನಿಯರ್ (ವಿ), ರವರಕಛೇರಿ,
ಕಾ ಮತ್ತು ಪಾ ವೃತ್ತ, ಚಾ.ನಗರ ಮತ್ತು ಕೊಡಗು,
ಶ್ರೀ ಹರ್ಷರಸ್ತೆ, ಚಾ.ವಿ.ಸ.ನಿ.ನಿ., ಮೈಸೂರು.
ದೂರವಾಣಿ: 0821-2420850, ಫ್ಯಾಕ್ಸ್:0821-2434077
ಈ-ಮೇಲ್: seechnkodagu@cescmysore.org

ಸಂಖ್ಯೆ: ಸಂಖ್ಯೆ: ಅಇಂ(ವಿ)/ಕಾನಿಇಂ/ಸಕಾನಿಇಂ/ಕ-127/2017-18/ ey8 . 181 ದಿನಾಂಕ: 6/12/17

ಲಗತ್ತು: ಛಾಯ ಚಿತ್ರದ ಪ್ರತಿಯೊಂದಿಗೆ

## ಸಭೆಯ ನಡಾವಳಿಗಳು

ದಿನಾಂಕ: 09.11.2017 ರಂದು ಗೋಣಿಕೊಪ್ಪ ಉಪ ವಿಭಾಗ ಕಛೇರಿಯಲ್ಲಿ ಜನ ಸಂಪರ್ಕ ಸಭೆಯನ್ನು ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವೃತ್ತ, ಚಾಮರಾಜನಗರ ಕೊಡಗು ರವರ ನೇತೃತ್ವದಲ್ಲಿ ನಡೆಸಲಾಯಿತು. ಗೋಣಿಕೊಪ್ಪ ಉಪ ವಿಭಾಗದ ವಿದ್ಯುತ್ ಗ್ರಾಹಕರು ವಿದ್ಯುಚ್ಛಕ್ತಿಗೆ ಸಂಬಂಧಿಸಿ ನಿವೇದಿಸಿಕೊಂಡ ದೂರುಗಳು ಮತ್ತು ಅವುಗಳ ಇತ್ಯರ್ಥಕ್ಕೆ ಕೈಗೊಂಡ ಕ್ರಮಗಳ ವಿವರಗಳು ಕೆಳಕಂಡಂತಿವೆ.

ಸಭೆಯಲ್ಲಿ ಹಾಜರಿದ್ದವರು.

1. ಶ್ರೀ ಕೆ.ರಾಮಚಂದ್ರ, ಅಧೀಕ್ಷಕ ಇಂಜಿನಿಯರ್(ವಿ), ಚಾಮರಾಜನಗರ ಕೊಡಗು ವೃತ್ತ.
2. ಶ್ರೀ ಸೋಮಶೇಖರ್, ಕಾರ್ಯ ನಿರ್ವಾಹಕ ಇಂಜಿನಿಯರ್(ವಿ), ಮಡಿಕೇರಿ ವಿಭಾಗ.
3. ಶ್ರೀಮತಿ ಎನ್. ತಾರಾ, ಕಾರ್ಯ ನಿರ್ವಾಹಕ ಇಂಜಿನಿಯರ್(ವಿ),ಚಾಮರಾಜನಗರ ಕೊಡಗು ವೃತ್ತ.
4. ಶ್ರೀಮತಿ ಆಲ್ಫೋನ್ಸಾ, ಲೆಕ್ಕಾಧಿಕಾರಿಗಳು, ಆಂತರಿಕ ಪರಿಶೋಧನೆ, ಮಡಿಕೇರಿ ವಿಭಾಗ.
5. ಶ್ರೀ ದರ್ಶನ್, ಪ್ರಭಾರ ಲೆಕ್ಕಾಧಿಕಾರಿಗಳು, ಮಡಿಕೇರಿ
6. ಶ್ರೀ ಎಂ. ಅಂಕಯ್ಯ, ಸ.ಕಾ.ನಿ.ಇಂ(ವಿ), ಗೋಣಿಕೊಪ್ಪಲು.
7. ಶ್ರೀ ಜೆ. ಹೇಮಚಂದ್ರ, ಸ.ಇಂ(ತಾಂ), ಗೋಣಿಕೊಪ್ಪಲು.
8. ಶ್ರೀ ವಿ. ಪಿ. ಜಗದೀಶ್, ಪ್ರಭಾರ ಹಿರಿಯ ಸಹಾಯಕ, ಗೋಣಿಕೊಪ್ಪಲು.
9. ಶ್ರೀ ಎಸ್. ಆರ್. ಕೃಷ್ಣಕುಮಾರ್, ಕಿರಿಯ ಇಂಜಿನಿಯರ್, ಗೋಣಿಕೊಪ್ಪಲು ಶಾಖೆ.
10. ಶ್ರೀ ಎಂ. ಇ. ವಿಜಯ ಕುಮಾರ್, ಶಾಖಾಧಿಕಾರಿ, ಶ್ರೀಮಂಗಲ ಶಾಖೆ.
11. ಶ್ರೀ ಕೆ. ವಿ. ಸೋಮೇಶ್, ಪ್ರಭಾರ ಶಾಖಾಧಿಕಾರಿ ಬಾಳೆಲೆ ಶಾಖೆ.

ಚಾ.ವಿ.ಸ.ನಿ.ನಿ. ನಿಗಮ ಕಾರ್ಯಾಲಯ ಮೈಸೂರು ನಂ 2880 ತಾ 8/12/17

**ದಿನಾಂಕ 19.05.2017 ರಂದು ಗೋಣಿಕೊಪ್ಪಲು ಉಪವಿಭಾಗದಲ್ಲಿ ನಡೆದ ಜನಸಂಪರ್ಕ ಸಭೆಯಲ್ಲಿ ಬಾಕಿ ಉಳಿದಿರುವ ದೂರುಗಳ ವಿವರ**

| ಕ್ರ.ಸಂ. | ಗ್ರಾಹಕರ ಹೆಸರು ಮತ್ತು ವಿಳಾಸ | ದೂರಿನ ವಿವರ | ಪ್ರಗತಿಯ ವಿವರ |
|---|---|---|---|
| 1. | ಶ್ರೀ ಟಿ. ಪಿ. ಜಗದೀಶ್, ಧನುಗಾಲ ಗ್ರಾಮ. | *ಬಸಪ್ಪ ಕಾಲೋನಿಯಲ್ಲಿ ವೋಲ್ಟೇಜ್ ಸಮಸ್ಯೆಯ ಬಗ್ಗೆ. | *ಅಂದಾಜು ಪಟ್ಟಿಯನ್ನು ತಯಾರಿಸಿ ವಿಭಾಗೀಯ ಕಛೇರಿಗೆ ದಿನಾಂಕ:26-07-2017 ರಂದು ಸಲ್ಲಿಸಲಾಗಿದೆ. |
| 2. | ಶ್ರೀ ಧರ್ಮಜ, ಕಳ್ಳಾಡು ಗ್ರಾಮ. | *ಕಳ್ಳಾಡು ಗ್ರಾಮಕ್ಕೆ ಹೊಸ ಲಿಂಕ್ ಲೈನ್ ಮಾರ್ಗವನ್ನು ಮಂಜೂರು ಮಾಡುವ ಬಗ್ಗೆ. | *4.5ಕಿ.ಮಿ ಉದ್ದದ ಹೊಸ ಲಿಂಕ್ ಲೈನ್ ಮಾರ್ಗದ ಅಂದಾಜು ಪಟ್ಟಿಯನ್ನು ತಯಾರಿಸಿ ದಿನಾಂಕ:11.07.2017 ರಂದು ವಿಭಾಗೀಯ ಕಛೇರಿಗೆ ಸಲ್ಲಿಸಲಾಗಿದೆ. ದಿ:10.08.2017 ರಂದು ವೃತ್ತ ಕಛೇರಿಯಿಂದ ವಲಯ ಕಛೇರಿಗೆ ಸಲ್ಲಿಸಲಾಗಿರುತ್ತದೆ. ಟೆಂಡರ್ ಪ್ರಕ್ರಿಯೆಗೊಸ್ಕರ ಕಾಯಲಾಗುತ್ತಿದೆ. |

DGM - RA-1 08/12

AGM RA4 11/12

| | | | |
|---|---|---|---|
| 3. | ಶ್ರೀ ಕೆ. ಪಿ. ಸುಬ್ಬಯ್ಯ, ಕಳ್ಮಾಡು ಗ್ರಾಮ. | *ಮಹದೇಶ್ವರ ದೇವಸ್ಥಾನದ ಹತ್ತಿರ ವೋಲ್ಟೇಜ್ ಸಮಸ್ಯೆಯ ಬಗ್ಗೆ. | *ಹೆಚ್ಚುವರಿ ಪರಿವರ್ತಕದ ಅಂದಾಜು ಪಟ್ಟಿಯನ್ನು ದಿನಾಂಕ: 21-07-2017 ತಯಾರಿಸಿ ವಿಭಾಗೀಯ ಕಛೇರಿಗೆ ಸಲ್ಲಿಸಲಾಗಿದೆ. |

**ದಿನಾಂಕ: 08.08.2017ರಂದು ಪಡೆದ ದೂರುಗಳ ವಿವರ:-**

| ಕ್ರಸಂ. | ಗ್ರಾಹಕರ ಹೆಸರು ಮತ್ತು ವಿಳಾಸ | ದೂರಿನ ವಿವರ | ತೆಗೆದುಕೊಂಡ ಕ್ರಮ |
|---|---|---|---|
| 1 | ಶ್ರೀ ಕೆ. ಎನ್. ಸಂದೀಪ್ ಮತ್ತು ಇತರರು,ಕಾಕೂರು | ವೋಲ್ಟೇಜ್ ಸಮಸ್ಯೆ ಇರುವುದರಿಂದ ಹೆಚ್ಚುವರಿ ಪರಿವರ್ತಕ ಅಳವಡಿಸಲು ಕೋರಿರುತ್ತಾರೆ. | ಅಧೀಕ್ಷಕ ಇಂಜಿನಿಯರ್(ವಿ). ರವರು ಮಾತನಾಡಿ ಸದರಿ ಸ್ಥಳ ಪರಿಶೀಲನೆ ನಡೆಸಿ ಅವಶ್ಯಕತೆ ಇದ್ದಲ್ಲಿ ಒಂದು ಹೆಚ್ಚುವರಿ ಪರಿವರ್ತಕಕ್ಕೆ ಅಂದಾಜು ಪಟ್ಟಿ ತಯಾರಿಸಿ ಸಲ್ಲಿಸಲು ಶಾಖಾಧಿಕಾರಿ ಗೋಣಿಕೊಪ್ಪಲು ರವರಿಗೆ ಸೂಚಿಸಿದರು. |
| 2 | ಟಿ. ಬಿ. ಬೆಳ್ಳಿಯಪ್ಪ, ಹಾಗೂ ಗ್ರಾಮಸ್ಥರು ಕುಟ್ಟ ಪಟ್ಟಣ. | ಕುಟ್ಟ ಪಟ್ಟಣಕ್ಕೆ ಇರುವ 100 ಕೆ. ವಿ.ಎ. ವಿದ್ಯುತ್ ಪರಿವರ್ತಕವು ಓವರ್ ಲೋಡ್ ನಿಂದ ಪದೇ ಪದೇ ಸುಡುತ್ತಿರುತ್ತದೆ. ಹಾಗೂ ಓಲ್ಟೇಜ್ ಸಮಸ್ಯೆ ಯನ್ನು ಬಗೆಹರಿಸಬೇಕೆಂದು ಕೋರಿರುತ್ತಾರೆ. | ಅಧೀಕ್ಷಕ ಇಂಜಿನಿಯರ್(ವಿ). ರವರು ಮಾತನಾಡಿ ಸದರಿ ಸ್ಥಳ ಪರಿಶೀಲನೆ ನಡೆಸಿ ಅವಶ್ಯಕತೆ ಇದ್ದಲ್ಲಿ ಒಂದು ಹೆಚ್ಚುವರಿ ಪರಿವರ್ತಕಕ್ಕೆ ಅಂದಾಜು ಪಟ್ಟಿ ತಯಾರಿಸಿ ಸಲ್ಲಿಸಲು ಶಾಖಾಧಿಕಾರಿ ಗೋಣಿಕೊಪ್ಪಲು ರವರಿಗೆ ಸೂಚಿಸಿದರು. |
| 3 | ಶ್ರೀ ಸಿ. ಸಿ. ಕುಟ್ಟಪ್ಪ, ಕೋಣಗೇರಿ ಗ್ರಾಮ. | * ಪೊನ್ನಂಪೇಟೆ ಉಪ-ವಿದ್ಯುತ್ ಕೇಂದ್ರದಿಂದ ಹುದಿಕೇರಿ ಪಟ್ಟಣಕ್ಕೆ ಸಂಪರ್ಕ ನೀಡುವ ಎಫ್-6 ಹುದಿಕೇರಿ ಎಕ್ಸ್‌ಪ್ರೆಸ್ ಫೀಡರ್ ಕಾಮಗಾರಿ ವಿಳಂಬವಾಗಿರುವ ಬಗ್ಗೆ.<br><br>* ಕೋಣಗೇರಿ ಮತ್ತು ಸುತ್ತಮುತ್ತಲಿನ ಗ್ರಾಮಗಳ 11 ಕೆ. ವಿ. ಮಾರ್ಗಗಳಲ್ಲಿ ಸೂಕ್ತ ಸ್ಥಳಗಳಲ್ಲಿ ಡಿ.ಓ.ಎಲ್.ಓ ಗಳನ್ನು ಅಳವಡಿಸಲು ಕೋರಿರುವ ಬಗ್ಗೆ.<br><br>* ಹುದಿಕೇರಿ ಗ್ರಾಮದಲ್ಲಿ ಹೊಸದಾಗಿ ಶಾಖಾ ಕಛೇರಿಯನ್ನು ಪ್ರಾರಂಭಿಸುವ ಬಗ್ಗೆ. | * ಕಾಮಗಾರಿ ಪೂರ್ಣಗೊಂಡಿದ್ದು 66/33/11 ಕೆ.ವಿ. ವಿದ್ಯುತ್ ವಿತರಣಾ ಕೇಂದ್ರ ಪೊನ್ನಂಪೇಟೆ ಯಲ್ಲಿ ಒಂದು ಬ್ರೇಕರ್ ಅನ್ನು ಅಳವಡಿಸುವಂತೆ ಕೆ. ಪಿ.ಟಿ.ಸಿ.ಎಲ್ ನವರಿಗೆ ಪತ್ರ ವ್ಯವಹರಿಸಲಾಗಿರುತ್ತದೆ.<br><br>* ಕೋಣಗೇರಿ ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ಅವಶ್ಯಕತೆ ಇರುವ ಕಡೆ ವಿದ್ಯುತ್ ವ್ಯತ್ಯಯ ಆಗದಂತೆ ಸೂಕ್ತ ಸ್ಥಳಗಳಲ್ಲಿ ಡಿ.ಓ.ಎಲ್.ಓ ಗಳನ್ನು ಅಳವಡಿಸಲು ಅಂದಾಜು ಪಟ್ಟಿಯನ್ನು ತಯಾರಿಸಲು ಶಾಖಾಧಿಕಾರಿ ಶ್ರೀಮಂಗಲ ರವರಿಗೆ ಸೂಚಿಸಲಾಯಿತು.<br><br>* ಹುದಿಕೇರಿ ಗ್ರಾಮದಲ್ಲಿ ಹೊಸ ಶಾಖಾ ಕಛೇರಿಯನ್ನು ರಚನೆ ಮಾಡಲು ಸ್ಥಳ ಪರಿಶೀಲನೆ ಮಾಡಿ ಶಿಫಾರಸ್ಸು ಮಾಡಲು ಸ.ಕಾ.ನಿ.ಇಂ(ವಿ) ಹಾಗೂ ಶಾಖಾಧಿಕಾರಿಯವರಿಗೆ ಸೂಚಿಸಲಾಯಿತು. |
| 4 | ಶ್ರೀ ಪಿ. ಡಿ. ಗಣಪತಿ, ಹೊಸಕೋಟೆ. | ತಮ್ಮ ತೋಟದ ಒಳಗಡೆ ಇರುವ ವಿದ್ಯುತ್ ಮಾರ್ಗವನ್ನು ಹೊರಗಡೆಗೆ ಸ್ಥಳಾಂತರಿಸಲು ಕೋರಿರುತ್ತಾರೆ. | ಅಧೀಕ್ಷಕ ಇಂಜಿನಿಯರ್(ವಿ). ರವರು ತೋಟದ ಒಳಗಡೆ ಇರುವ 9 ಕಂಬಗಳ ವಿದ್ಯುತ್ ಮಾರ್ಗವನ್ನು ಹೊರಗಡೆ ಸ್ಥಳಾಂತರಿಸಲು ಅಂದಾಜು ಪಟ್ಟಿ ತಯಾರಿಸಿ ಸಲ್ಲಿಸಲು ಶಾಖಾಧಿಕಾರಿ ಗೋಣಿಕೊಪ್ಪಲು ರವರಿಗೆ ಸೂಚಿಸಿದರು. |
| 5 | ಶ್ರೀ ಎಸ್. ಬಿ. ಅಚ್ಚಯ್ಯ, | ತಿತಿಮತಿ ಫೀಡರ್ ನಿಂದ ಸರಬರಾಜಾಗುತ್ತಿರುವ | ಅಧೀಕ್ಷಕ ಇಂಜಿನಿಯರ್(ವಿ). ರವರು |

| | | | |
|---|---|---|---|
| | ಬಾಲಾಜಿ ಗ್ರಾಮ. | ವಿದ್ಯುತ್ ನಿಂದ ವೋಲ್ಟೇಜ್ ವ್ಯತ್ಯಯ ವಾಗಿರುತ್ತದೆ. ಸಮಸ್ಯೆಯನ್ನು ಪರಿಹರಿಸಲು ಕೋರಿರುತ್ತಾರೆ. | ಮಾತನಾಡಿ ಪರಿವರ್ತಕವನ್ನು ಪರೀಕ್ಷಿಸಿ ವೋಲ್ಟೇಜ್ ಸಮಸ್ಯೆ ಸರಿಪಡಿಸಲು ಹಾಗೂ ಇಲ್ಲವಾದಲ್ಲಿ ಪರಿವರ್ತಕವನ್ನು ಬದಲಾಯಿಸಲು ಕ್ರಮ ಕೈಗೊಳ್ಳುವಂತೆ ಶಾಖಾಧಿಕಾರಿ ಗೋಣಿಕೊಪ್ಪಲು ರವರಿಗೆ ಸೂಚಿಸಿದರು. |
| 6 | ಶ್ರೀ ಟಿ. ಬಿ. ಬೆಳ್ಳಿಯಪ್ಪ ಮತ್ತು ಇತರರು, ಕುಟ್ಟ ಗ್ರಾಮ. | ವೋಲ್ಟೇಜ್ ಸಮಸ್ಯೆ ಇರುವುದರಿಂದ ಹೆಚ್ಚುವರಿ ಪರಿವರ್ತಕ ಅಳವಡಿಸಲು ಕೋರಿರುತ್ತಾರೆ. | ಅಧೀಕ್ಷಕ ಇಂಜನಿಯರ್(ವಿ), ರವರು ಮಾತನಾಡಿ ಸದರಿ ಸ್ಥಳ ಪರಿಶೀಲನೆ ನಡೆಸಿ ಅವಶ್ಯಕತೆ ಇದ್ದಲ್ಲಿ ಒಂದು ಹೆಚ್ಚುವರಿ ಪರಿವರ್ತಕಕ್ಕೆ ಅಂದಾಜು ಪಟ್ಟಿ ತಯಾರಿಸಿ ಕಾರ್ಯಾದೇಶ ಪಡೆದು ಕೆಲಸ ಕೈಗೆತ್ತಿಕೊಳ್ಳಲು ಶಾಖಾಧಿಕಾರಿ ಶ್ರೀಮಂಗಲ ರವರಿಗೆ ಸೂಚಿಸಿದರು. |
| 7 | ಶ್ರೀ ಬಿ. ಬಿ. ಜನಕ, ಪೊನ್ನಂಪೇಟೆ. | ವೋಲ್ಟೇಜ್ ಸಮಸ್ಯೆ ಇರುವುದರಿಂದ ಹೆಚ್ಚುವರಿ ಪರಿವರ್ತಕ ಅಳವಡಿಸಲು ಕೋರಿರುತ್ತಾರೆ. | ಅಧೀಕ್ಷಕ ಇಂಜನಿಯರ್(ವಿ), ರವರು ಮಾತನಾಡಿ ಸದರಿ ಸ್ಥಳ ಪರಿಶೀಲನೆ ನಡೆಸಿ ಅವಶ್ಯಕತೆ ಇದ್ದಲ್ಲಿ ಒಂದು ಹೆಚ್ಚುವರಿ ಪರಿವರ್ತಕಕ್ಕೆ ಅಂದಾಜು ಪಟ್ಟಿ ತಯಾರಿಸಿ ಸಲ್ಲಿಸಲು ಶಾಖಾಧಿಕಾರಿ ಗೋಣಿಕೊಪ್ಪಲು ರವರಿಗೆ ಸೂಚಿಸಿದರು. |
| 8 | ಶ್ರೀ ಹೆಚ್. ಕೆ. ಅಚ್ಚಯ್ಯ, ಹೈಸೊಡ್ಲೂರು ಗ್ರಾಮ. | ವಿದ್ಯುತ್ ತಂತಿಯು ತೀರಾ ಕೆಳಮಟ್ಟದಲ್ಲಿದ್ದು ಸಂಬಂದಪಟ್ಟ ಮಾರ್ಗದಾಳುರವರು ಸ್ಪಂದಿಸುತ್ತಿಲ್ಲದಿರುವ ಬಗ್ಗೆ ತಿಳಿಸಿದರು.<br>* ರವಿ, ಮಾರ್ಗದಾಳು ರವರು ಸರಿಯಾಗಿ ಕರ್ತವ್ಯ ನಿರ್ವಹಿಸುತ್ತಿಲ್ಲದಿರುವ ಬಗ್ಗೆ. | ಅಧೀಕ್ಷಕ ಇಂಜನಿಯರ್(ವಿ), ರವರು ಮಾತನಾಡಿ ಕೂಡಲೇ ಕೆಳಮಟ್ಟದಲ್ಲಿರುವ ತಂತಿಯನ್ನು ಸರಿಪಡಿಸಲು ಶಾಖಾಧಿಕಾರಿ ಶ್ರೀಮಂಗಲ ರವರಿಗೆ ಸೂಚಿಸಿದರು.<br>* ಶ್ರೀ ರವಿ, ಮಾರ್ಗದಾಳು ರವರನ್ನು ಬೇರೆ ಕಡೆಗೆ ವರ್ಗಾವಣೆ ಮಾಡಿ ಕ್ರಮ ಕೈಗೊಳ್ಳುವಂತೆ ಸ.ಕಾ.ನಿ.ಇಂ(ವಿ) ರವರಿಗೆ ಸೂಚಿಸಿದರು. |

**ದಿನಾಂಕ: 09.11.2017ರಂದು ಪಡೆದ ದೂರುಗಳ ವಿವರ:-**

| ಕ್ರ.ಸಂ. | ಗ್ರಾಹಕರ ಹೆಸರು ಮತ್ತು ವಿಳಾಸ | ದೂರಿನ ವಿವರ | ತೆಗೆದುಕೊಂಡ ಕ್ರಮ |
|---|---|---|---|
| 1 | ಶ್ರೀ ಜಗದೀಶ್, ಧನುಗಾಲ ಗ್ರಾಮ. | ವೋಲ್ಟೇಜ್ ಸಮಸ್ಯೆ ಇರುವುದರಿಂದ ಹೆಚ್ಚುವರಿ ಪರಿವರ್ತಕ ಅಳವಡಿಸಲು ಹಿಂದಿನ ಸಭೆಯಲ್ಲಿ ಕೋರಿದ್ದು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಹಾಗೂ ಮಾರ್ಗದಾಳುಗಳು ತುರ್ತು ಸಂದರ್ಭದಲ್ಲಿ ದೂರವಾಣಿ ಕರೆಗಳನ್ನು ಸ್ವೀಕರಿಸದೇ ಇರುವ ಬಗ್ಗೆ ದೂರಿದರು. | ಅಧೀಕ್ಷಕ ಇಂಜನಿಯರ್(ವಿ), ರವರು ಮಾತನಾಡಿ ಈಗಾಗಲೇ ಸದರಿ ಕೆಲಸಕ್ಕೆ ಕಾರ್ಯದೇಶ ದೊರೆತ್ತಿದ್ದು ಒಂದು ವಾರದಲ್ಲಿ ಕೆಲಸ ಕೈಗೆತ್ತಿಕೊಂಡು ಕೆಲಸ ಪೂರ್ಣಗೊಳಿಸಲು ಶಾಖಾಧಿಕಾರಿ ಗೋಣಿಕೊಪ್ಪಲು ರವರಿಗೆ ಸೂಚಿಸಿದರು.<br>ಅಧೀಕ್ಷಕ ಇಂಜನಿಯರ್(ವಿ), ರವರು ಮಾತನಾಡಿ ಪ್ರತಿ ದಿನ ಮಾರ್ಗದಾಳುಗಳನ್ನು ಪ್ರತ್ಯೇಕವಾಗಿ ಕರೆಸಿ ಗ್ರಾಹಕರ ದೂರುಗಳಿಗೆ ಸ್ಪಂದಿಸದೇ ಇರುವ ಮಾರ್ಗದಾಳುಗಳಿಗೆ ಎಚ್ಚರಿಕೆ ನೀಡುವಂತೆ ಶಾಖಾಧಿಕಾರಿಗಳು ಗೋಣಿಕೊಪ್ಪಲು ರವರಿಗೆ ಸೂಚಿಸಿದರು. ಇಲ್ಲವಾದಲ್ಲಿ ಸೂಕ್ತ ಶಿಸ್ತು ಕ್ರಮ ಅಥವಾ ಅಮಾನತ್ತು ಪಡಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಸೂಚಿಸಿದರು. |
| 2 | ಶ್ರೀ ಪಿ. ಟಿ. ಸುಬ್ಬಯ್ಯ, ಬಾಳೆಲೆ ಗ್ರಾಮ. | ಕಳೆದ ಎರಡು ವರ್ಷಗಳ ಹಿಂದೆ ಸಂಭವಿಸಿದ ಮಳೆಗಾಳಿಯಿಂದಾಗಿ ಕಂಬಗಳು ಮುರಿದಿದ್ದು, ಈ ಕೆಲಸ | ಅಧೀಕ್ಷಕ ಇಂಜನಿಯರ್(ವಿ), ರವರು ಮಾತನಾಡಿ ತಕ್ಷಣ ಸಂಬಂಧಪಟ್ಟ ಕೆಲಸದ ಲೇಬರ್ ಅವಾರ್ಡ್ ಬಿಲ್ಲುಗಳ ನ್ಯೂನತೆಗಳನ್ನು ಸರಿಪಡಿಸಿ ಹಾಗೂ |

| | | | |
|---|---|---|---|
| | | ಪೂರ್ಣಗೊಂಡ ಲೇಬರ್ ಅವಾರ್ಡ್ ಬಿಲ್ಲು ಪಾವತಿ ಯಾಗದಿರುವ ಬಗ್ಗೆ ಮಾಹಿತಿ ಕೋರಿರುತ್ತಾರೆ. | ಸಮಾಪನ ವರದಿಯನ್ನು ವಿಭಾಗ ಕಛೇರಿಗೆ ಖುದ್ದಾಗಿ ಸಲ್ಲಿಸಿ ಲೇಬರ್ ಅವಾರ್ಡ್ ಬಿಲ್ಲನ್ನು ಸದರಿ ಕೆಲಸ ಪೂರ್ಣಗೊಳಿಸಿದ ಗುತ್ತಿಗೆ ದಾರರಿಗೆ ಪಾವತಿ ಯಾಗುವಂತೆ ಕ್ರಮ ಕೈಗೊಳ್ಳಲು ಶಾಖಾಧಿಕಾರಿಗಳು ಬಾಳೆಲೆ ರವರಿಗೆ ಸೂಚಿಸಿದರು. |
| 3 | ಶ್ರೀ ಸಿ. ಸಿ. ಕುಟ್ಟಪ್ಪ, ಕೋಣಗೇರಿ ಗ್ರಾಮ. | ತಮ್ಮ ತೋಟದಲ್ಲಿರುವ ಹಾಲಿ ಪರಿವರ್ತಕವನ್ನು ಮೇಲ್ದರ್ಜೆಗೆ ಏರಿಸಲು ಕೋರಿರುತ್ತಾರೆ. | ಅಧೀಕ್ಷಕ ಇಂಜಿನಿಯರ್(ವಿ), ರವರು ಮಾತನಾಡಿ ಸದರಿ ಗ್ರಾಹಕರ ಸ್ಥಳ ಪರಿಶೀಲನೆಯನ್ನು ಕಾರ್ಯನಿರ್ವಾಹಕ ಅಭಿಯಂತರರು ಮಡಿಕೇರಿ ಮತ್ತು ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು ಗೋಣಿಕೊಪ್ಪಲು ರವರೊಂದಿಗೆ ನಡೆಸಿ ಅವಶ್ಯಕತೆ ಇದ್ದಲ್ಲಿ ಹಾಲಿ ಇರುವ ಪರಿವರ್ತಕವನ್ನು ಮೇಲ್ದರ್ಜೆಗೆ ಏರಿಸಲು ಕ್ರಮ ಕೈಗೊಳ್ಳುವಂತೆ ಶಾಖಾಧಿಕಾರಿಗಳು ಶ್ರೀಮಂಗಲ ರವರಿಗೆ ಸೂಚಿಸಿದರು. |
| 4 | ಶ್ರೀ ತಿಮ್ಮಯ್ಯ ಹೆಚ್.ಯು ಮತ್ತು ಶ್ರೀ ಸಿ. ಈ. ನಂದ, ಹಳ್ಳಿಗಟ್ಟು ಗ್ರಾಮ. | ವೋಲ್ಟೇಜ್ ಸಮಸ್ಯೆ ಇರುವುದರಿಂದ ಹೆಚ್ಚುವರಿ ಪರಿವರ್ತಕ ಅಳವಡಿಸಲು ಕೋರಿರುತ್ತಾರೆ. | ಅಧೀಕ್ಷಕ ಇಂಜಿನಿಯರ್(ವಿ), ರವರು ಮಾತನಾಡಿ ಕೂಡಲೇ ಸ್ಥಳ ಪರಿಶೀಲನೆ ನಡೆಸಿ ಅವಶ್ಯಕತೆ ಇದ್ದಲ್ಲಿ ಒಂದು ಅಧಿಕ ಪರಿವರ್ತಕ್ಕೆ ಅಂದಾಜು ಪಟ್ಟಿ ತಯಾರಿಸಿ ಸಲ್ಲಿಸಲು ಶಾಖಾಧಿಕಾರಿ ಗೋಣಿಕೊಪ್ಪಲು ಶಾಖೆ ರವರಿಗೆ ಸೂಚಿಸಿದರು. |
| 5 | ಶ್ರೀ ಅನುಪ್ ಕುಮಾರ್, ತಿತಿಮತಿ ಗ್ರಾಮ. | ತಿತಿಮತಿ ಗ್ರಾಮಕ್ಕೆ ಒಂದು ಎಕ್ಸ್‌ಪ್ರೆಸ್ ಫೀಡರ್ ಮಂಜೂರು ಮಾಡಿಕೊಡುವಂತೆ ಕೋರಿರುತ್ತಾರೆ. | ಅಧೀಕ್ಷಕ ಇಂಜಿನಿಯರ್(ವಿ), ರವರು ಮಾತನಾಡಿ ಈಗಾಗಲೇ ಗೋಣಿಕೊಪ್ಪಲು, ತಿತಿಮತಿ, ಎಕ್ಸ್‌ಪ್ರೆಸ್ ಫೀಡರ್‌ನ ಕೆಲಸಕ್ಕೆ ಟೆಂಡರ್ ದೊರೆತ್ತಿದ್ದು, ಕೂಡಲೇ ಕೆಲಸ ಪ್ರಾರಂಭ ಮಾಡಲು ಸಂಭಂದಪಟ್ಟ ಏಜೆನ್ಸಿ ಯವರಿಗೆ ದೂರವಾಣಿ ಕರೆಮಾಡಿ ಸೂಚಿಸಿದರು. |
| 6 | ಶ್ರೀ ಎ.ಪಿ. ಚಂಗಪ್ಪ, ಬೀರುಗ ಗ್ರಾಮ. | ವೋಲ್ಟೇಜ್ ಸಮಸ್ಯೆ ಇರುವುದರಿಂದ ಹೆಚ್ಚುವರಿ ಪರಿವರ್ತಕ ಅಳವಡಿಸಲು ಕೋರಿರುತ್ತಾರೆ. | ಅಧೀಕ್ಷಕ ಇಂಜಿನಿಯರ್(ವಿ), ರವರು ಮಾತನಾಡಿ ಕೂಡಲೇ ಸ್ಥಳ ಪರಿಶೀಲನೆ ನಡೆಸಿ ಅವಶ್ಯಕತೆ ಇದ್ದಲ್ಲಿ ಒಂದು ಅಧಿಕ ಪರಿವರ್ತಕ್ಕೆ ಅಂದಾಜು ಪಟ್ಟಿ ತಯಾರಿಸಿ ಸಲ್ಲಿಸಲು ಶಾಖಾಧಿಕಾರಿ ಶ್ರೀಮಂಗಲ ಶಾಖೆ ರವರಿಗೆ ಸೂಚಿಸಿದರು. |
| 7 | ಶ್ರೀ ನಾಚಪ್ಪ, ನಾಲ್ಕೇರಿ ಗ್ರಾಮ. | ದುರಸ್ತಿಯಾಗಿರುವ 25 ಕೆ.ವಿ.ಎ. ಪರಿವರ್ತಕ ಬದಲಾವಣೆ ಮಾಡಲು ಕೋರಿರುತ್ತಾರೆ.<br>ಶ್ರೀಮಂಗಲ ಶಾಖಾಧಿಕಾರಿ ದೂರವಾಣಿ ಕರೆಗೆ ಸ್ಪದಿಸುತ್ತಿಲ್ಲದಿರುವ ಬಗ್ಗೆ.<br>ಐ.ಪಿ. ಸೆಟ್ ಸ್ಥಾವರದ ಮಾರ್ಗವು ಯಾವ ಶಾಖೆಗೆ ಒಳಪಟ್ಟಿರುತ್ತದೆ ಎಂದು ಮಾಹಿತಿ ನೀಡುವಂತೆ ಹಾಗೂ ನಿರಂತರ ವಿದ್ಯುತ್ ಪೂರೈಕೆಗೆ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ. | ಅಧೀಕ್ಷಕ ಇಂಜಿನಿಯರ್(ವಿ), ರವರು ಮಾತನಾಡಿ ಗ್ರಾಹಕರ ಸ್ಥಾವರದ ಸ್ಥಳ ಪರಿಶೀಲನೆ ನಡೆಸಿ ಕೂಡಲೇ ಪರಿವರ್ತಕ ಬದಲಾವಣೆ ಮಾಡಲು ಕ್ರಮ ಕೈಗೊಳ್ಳುವಂತೆ ಶಾಖಾಧಿಕಾರಿ ಶ್ರೀಮಂಗಲ ರವರಿಗೆ ಸೂಚಿಸಿದರು.<br>ಶಾಖಾಧಿಕಾರಿ ಶ್ರೀಮಂಗಲರವರು ಗ್ರಾಹಕರ ದೂರವಾಣಿ ಕರೆಗಳಿಗೆ ಸ್ಪಂದಿಸುವಂತೆ ಸೂಚಿಸಲಾಯಿತು.<br>ಸದರಿ ಗ್ರಾಹಕರ ಐ.ಪಿ.ಸೆಟ್ ಸ್ಥಾವರದ ಸ್ಥಳ ಪರಿಶೀಲನೆ ನಡೆಸಿ ನಿರಂತರ ವಿದ್ಯುತ್ ಪೂರೈಕೆಗೆ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. |
| 8 | ಶ್ರೀ ಸಿ. ಎಸ್. ಕುಶಾಲಪ್ಪ, ದೇವನೂರು ಗ್ರಾಮ. | ವಿದ್ಯುತ್ ತಂತಿ ತೀರಾ ಕೆಳಮಟ್ಟದಲ್ಲಿರುವ ಬಗ್ಗೆ. | ಅಧೀಕ್ಷಕ ಇಂಜಿನಿಯರ್(ವಿ), ರವರು ಮಾತನಾಡಿ ಕೂಡಲೇ ಸ್ಥಳ ಪರಿಶೀಲನೆ ನಡೆಸಿ ಮಧ್ಯಂತರ ಕಂಬ ಅಳವಡಿಸಲು ಕ್ರಮ ಕೈಗೊಳ್ಳುವಂತೆ ಶಾಖಾಧಿಕಾರಿ ಗೋಣಿಕೊಪ್ಪಲು ರವರಿಗೆ ಸೂಚಿಸಿದರು. |
| 9 | ಶ್ರೀ ಹೆಚ್. ಕೆ. ಅಚ್ಚಯ್ಯ, ಹೈಸೊಡ್ಲುರು ಗ್ರಾಮ | ವಿದ್ಯುತ್ ತಂತಿ ತೀರಾ ಕೆಳಮಟ್ಟದಲ್ಲಿರುವ ಬಗ್ಗೆ ಕಳೆದ | ಅಧೀಕ್ಷಕ ಇಂಜಿನಿಯರ್(ವಿ), ರವರು ಮಾತನಾಡಿ ಕೂಡಲೇ ಮಧ್ಯಂತರ ಕಂಬ ಅಳವಡಿಸಲು ಕ್ರಮ |

| | | | |
|---|---|---|---|
| | | ಭಾರಿಯ ಸಭೆಯಲ್ಲಿ ದೂರು ನೀಡಿದ್ದರೂ ಕ್ರಮ ಕೈಗೊಂಡಿಲ್ಲದಿರುವ ಬಗ್ಗೆ.<br>ಹುದಿಕೇರಿ ಮಾರ್ಗದಾಳು ರವಿ ರವರು ಸರಿಯಾಗಿ ಕಾರ್ಯ ನಿರ್ವಹಿಸದೇ ಇರುವ ಬಗ್ಗೆ. | ಕೈಗೊಳ್ಳುವಂತೆ ಶಾಖಾಧಿಕಾರಿ ಶ್ರೀಮಂಗಲ ರವರಿಗೆ ಸೂಚಿಸಿದರು. ಹಾಗೂ .ಕೆಲಸ ಪೂರ್ಣಗೊಂಡ ವರದಿಯನ್ನು ದೂರವಾಣಿ ಮುಖಾಂತರ ತಿಳಿಸಲು ಶಾಖಾಧಿಕಾರಿಗಳಿಗೆ ಸೂಚಿಸಿದರು.<br>ಅಧೀಕ್ಷಕ ಇಂಜಿನಿಯರ್(ವಿ), ರವರು ಮಾತನಾಡಿ ಕೂಡಲೇ ಶ್ರೀ ರವಿ ಮಾರ್ಗದಾಳು ರವರನ್ನು ಹುದಿಕೇರಿ ಕ್ಯಾಂಪ್ ನಿಂದ ಬದಲಾವಣೆ ಮಾಡುವಂತೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಗೋಣಿಕೊಪ್ಪಲು ರವರಿಗೆ ಸೂಚಿಸಿದರು. |

ಅಧೀಕ್ಷಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ., ಕಾ ಮತ್ತು ಪಾ ವೃತ್ತ,
ಚಾಮರಾಜನಗರ ಮತ್ತು ಕೊಡಗು.

ಪ್ರತಿಯನ್ನು:

1. ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರು ರವರಿಗೆ ಸಲ್ಲಿಸಲಾಗಿದೆ.
2. ಪ್ರಧಾನ ವ್ಯವಸ್ಥಾಪಕರು (ವಾಣಿಜ್ಯ), ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
3. ವ್ಯವಸ್ಥಾಪಕ ನಿರ್ದೇಶಕರ ಕಾರ್ಯನಿವಾಹಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
4. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾವಿಸನಿನಿ, ಕಾ ಮತ್ತು ಪಾ ವಿಭಾಗ, ಮಡಿಕೇರಿ ರವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
5. ನಿರ್ದೇಶಕರು(ತಾಂತ್ರಿಕ) ರವರ ತಾಂತ್ರಿಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
6. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾ.ವಿ.ಸ.ನಿ.ನಿ., ಗೋಣಿಕೊಪ್ಪ ಉಪವಿಭಾಗ ರವರ ಮಾಹಿತಿಗಾಗಿ.
7. ಹಿಆಸ/ಪ್ರಕ/ಕಡತ.